ಓ.ಎಸ್. ನಂಬರ:-34 /2023

ಡಿ.ಡಬ್ಲೂ-:-4 : ಮಲ್ಲಿಕಾರ್ಜುನ ತಂದೆ ಬಸವರಾಜ ಪಾಟೀಲ್

ದಿನಾಂಕ:- 23-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಪಾಟೀ ಸವಾಲು : ೧ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎ ಎಸ್ ಕೆ ವಕೀಲರಿಂದ :-*

ನನ್ನ ಹತ್ತಿರ ೧ನೇ ಪ್ರತಿವಾದಿ ಅವರಿಗೆ ಮತ್ತು ಅವರ ತಾಯಿಗೆ ಆರೋಗ್ಯ ಸರಿ ಇಲ್ಲದಾಗ ಒಮ್ಮೆ ೭ ಲಕ್ಷ ಮತ್ತು ಮೊತ್ತೊಮ್ಮೆ ೮ ಲಕ್ಷ ಹಣವನ್ನು ನನ್ನಿಂದ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಹಣವನ್ನು ವಾದಿಯನ್ನು ಕೇಳಿದರೂ ಸಹ ಅವರು ನನಗೆ ಹಣವನ್ನು ನೀಡಿರುವುದಿಲ್ಲ. ೧ನೇ ಪ್ರತಿವಾದಿಯನ್ನು ಕೇಳಿದರೂ ಸಹ ಅವರೂ ಕೂಡಾ ನನಗೆ ಹಣ ನೀಡಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯಾದ ೨ನೇ ಪ್ರತಿವಾದಿ ಮತ್ತು ನಾನು ಕೂಡಿ ಇರುವುದಿಲ್ಲ. ನಾನು ೧ನೇ ಪ್ರತಿವಾದಿ ಪಾಲಿನ ಆಸ್ತಿಯನ್ನು ಖರೀದಿಸಿರುತ್ತೇನೆ. ವಾದಿ ಮತ್ತು ೧ನೇ ಪ್ರತಿವಾದಿ ನನ್ನ ತಾಯಿಯಾದ ೨ನೇ ಪ್ರತಿವಾದಿಯ ಸಹೋದರರಾಗಿರುತ್ತಾರೆ. ನಮ್ಮದು ರೇಷನ್ ಅಂಗಡ ಮತ್ತು ಆನಲೈನ ಗ್ರಾಮ ಓನ ಅಂಗಡಿ ಇದ್ದು, ನಮ್ಮ ಊರಿನಲ್ಲಿ ಜಮೀನೂ ಕೂಡಾ ಇದೆ ಹಣವನ್ನು ನಮ್ಮ ತಂದೆ ಇದ್ದಾಗ ಸ್ವಲ್ಪ ನೀಡಿದ್ದರು ಮತ್ತು ನಾವು ಸ್ವಲ್ಪ ನೀಡಿರುತ್ತೇವೆ. ಹಣವನ್ನು ನೀಡಿದ ಬಗ್ಗೆ ವಾದಿಗೆ ಗೊತ್ತಿರುತ್ತದೆ. ವಾದಿ ಮತ್ತು ೧ನೇ ಪ್ರತಿವಾದಿಯ ವ್ಯವಹಾರಗಳು ನನಗೆ ಗೊತ್ತಿರುತ್ತದೆ.

೨.	ನಮ್ಮ ತಾಯಿಯಾದ ೨ನೇ ಪ್ರತಿವಾದಿಗೆ ಆಸ್ತಿಯಲ್ಲಿ ಪಾಲು ನಿಡಿರುವುದಿಲ್ಲ. ನಾನು ಆಸ್ತಿ ಖರೀದಿ ಮಾಡುವಾಗ ವಾದಿಯನ್ನು ಕೇಳಿರುತ್ತೇನೆ, ಆಗ ಅವರು ೧ನೇ ಪ್ರತಿವಾದಿ ತನಗೆ ಸೇರಿದ ಜಮೀನನ್ನು ಏನು ಬೇಕಾದರು ಮಾಡಲಿ ಎಂದು ಹೇಳಿರುತ್ತಾರೆ. ವಾದಿಗೆ ಸೇರಿದ ಸರ್ವೆ ನಂಬರ ೧೦೦ರ ಜಮೀನನ್ನು ಮಾರಾಟ ಮಾಡಿ, ಅವರು ಕಲಬುರಗಿಗೆ ಹೋಗಿರುತ್ತಾರೆ. ಜಮೀನು ಮಾರಾಟ ಮಾಡಿ ಬಂದ ಹಣವನ್ನು ವಾದಿ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜಮೀನು ಮಾರಾಟ ಮಾಡಿದ ನಂತರ ವಾದಿಯ ಹೆಂಡತಿಗೆ ನೌಕರಿ ಮತ್ತು ವಾದಿ ಮನೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ೨ ಮನೆ ಕಟ್ಟಿ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಈ ದಾವೆ ಇದ್ದ ವಿಚಾರ ಗೊತ್ತಿದ್ದೂ ಕೂಡಾ ನಾನು ಆಸ್ತಿ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

೩.	೧ನೇ ಪ್ರತಿವಾದಿಗೆ ಹೆಂಡತಿ ಮಕ್ಕಳು ಇರದ ಕಾರಣ ಅವರ ಆಸ್ತಿಯನ್ನು ಹೊಡೆಯುವ ಉದ್ದೇಶದಿಂದ ನಾನು ಒಂದು ಸುಳ್ಳು ಖರೀದಿ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ತನ್ನನ್ನು ತಾನೆ ನೋಡಿಕೊಳ್ಳುತ್ತಾರೆ. ಅವರನ್ನು ಯಾರೂ ಈಗ ನೋಡಿಕೊಳ್ಳುತ್ತಿರುವುದಿಲ್ಲ. ೧ನೇ ಪ್ರತಿವಾದಿ ಆಸ್ತಿ ಹೊಡೆಯುವ ಉದ್ದೇಶವನ್ನು ವಾದಿ ಮತ್ತು ೨ನೇ ಪ್ರತಿವಾದಿಯಾದ ನನ್ನ ತಾಯಿ ಮತ್ತು ನಾನು ಹೊಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಪರ ವಕೀಲರು ಗೈರು ಹಾಜರಿರುವುದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.